# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# ಕೆಂಗೇರಿ ಉಪ ವಿಭಾಗ, ವಾರ್ಡ್ ನಂ.198, ಹೆಮ್ಮಿಗೆಪುರ
# ವಾರ್ಡ್ ಸಮಿತಿ ಸಭೆ ದಿನಾಂಕ: 18/06/2022ರ
# ಸಭಾ ನಡವಳಿ

ಸಕಾಅ/ಕೆಂಉವಿ/ವಾರ್ಡ್ ಕಮಿಟಿ–ಸಭೆ –06/2022–23

ದಿನಾಂಕ: 18.06.2022

ದಿನಾಂಕ: 18/06/2022 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.198, ಹೆಮ್ಮಿಗೆಪುರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಪಟ್ಟಣಗೆರೆ, ಬಿ.ಬಿ.ಎಂ.ಪಿ. ಸಮುದಾಯಭವನ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ಹಾಜರಿದ್ದವರು:

| ಕ್ರ ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಸಿ.ಎಂ. ಶಿವಕುಮಾರ್ | ನೋಡಲ್ ಅಧಿಕಾರಿ, ವಾರ್ಡ್ ನಂ.198(ಹೆಮ್ಮಿಗೆಪುರ) ಹಾಗೂ ಅಧೀಕ್ಷಕ ಅಭಿಯಂತರರು ಬೃಹತ್ ನೀರುಗಾಲುವೆ ವಿಭಾಗ, ಕೇಂದ್ರ ಕಛೇರಿ |
| 2 | ಶ್ರೀ ದಯಾನಂದ.ಎನ್ | ಸಹಾಯಕ ಅಭಿಯಂತರರು, ವಾರ್ಡ್–198, ಹೆಮ್ಮಿಗೆಪುರ |
| 3 | ಶ್ರೀ ಗವಿಸಿದ್ದಯ್ಯ | ಸಹಾಯಕ ಅಭಿಯಂತರರು ವಿದ್ಯುತ್ ವಿಭಾಗ, ರಾರಾನವ ಬಿ.ಬಿ.ಎಂ.ಪಿ |
| 4 | ಶ್ರೀ ರವಿಚಂದ್ರಚಾರಿ ಟಿ.ಕೆ | ಹಿರಿಯ ಆರೋಗ್ಯಪರಿವೀಕ್ಷಕರು ವಾರ್ಡ್ ನಂ.198, ಬಿಬಿಎಂಪಿ |
| 5 | ಶ್ರೀ ಸಿ.ವಿ. ಸೂರ್ಯನಾರಾಯಣ | ಜಲ ಪರಿವೀಕ್ಷರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 6 | ಶ್ರೀ ಕೃಷ್ಣಾನಾಯಕ್ | ಕೆಲಸ ಪರಿವೀಕ್ಷಕರು ವಾರ್ಡ್ ನಂ.198, ಹೆಮ್ಮಿಗೆಪುರ |



Scanned by CamScanner

| ಕ್ರ.ಸಂ | ಸಭೆಗೆ ಗೈರು ಹಾಜರಾದ ಅಧಿಕಾರಿಗಳು | ಇಲಾಖೆ |
|---|---|---|
| 1 | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ರಸ್ತೆ ಮೂಲ ಭೂತ ಸೌಕರ್ಯವಿಭಾಗ, ಬಿ.ಬಿ.ಎಂ.ಪಿ, ರಾರಾನಗರ ವಲಯ |
| 2 | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ, ರಾರಾನಗರ ವಲಯ |
| 3 | ಪಶುಪಾಲನಾ ಅಧಿಕಾರಿಗಳು | ಪಶುಪಾಲನಾ ಇಲಾಖೆ, ಬಿ.ಬಿ.ಎಂ.ಪಿ ರಾಜರಾಜೇಶ್ವರಿನಗರ ವಲಯ, |
| 4 | ವಲಯ ಅರಣ್ಯ ಅಧಿಕಾರಿಗಳು | ಅರಣ್ಯ ಇಲಾಖೆ, ಬಿ.ಬಿ.ಎಂ.ಪಿ, ರಾಜರಾಜೇಶ್ವರಿನಗರ ವಲಯ, |
| 5 | ತೋಟಗಾರಿಕಾ ಅಧಿಕ್ಷಕರು | ತೋಟಗಾರಿಕೆ ಇಲಾಖೆ, ಬಿಬಿಎಂಪಿ, ರಾಜರಾಜೇಶ್ವರಿನಗರ ವಲಯ, |
| 6 | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ಬೆಸ್ಕಾಂ, ಕೆಂಗೇರಿ ಮತ್ತು ಬೆಸ್ಕಾಂ ತಲಘಟ್ಟಪುರ |
| 7 | ಪೊಲೀಸ್ ಇಲಾಖೆ | ಕೆಂಗೇರಿ, ರಾಜರಾಜೇಶ್ವರಿನಗರ ಮತ್ತು ರಲಘಟ್ಟಪುರ ಪೊಲೀಸ್ ಠಾಣೆ |
| 8 | ಗುತ್ತಿಗೆದಾರರು | ಘನತ್ಯಾಜ್ಯ ನಿರ್ವಹಣೆ, ಹೆಮ್ಮಿಗೆಪುರ ವಾರ್ಡ್ ನಂ.198 |
| 9 | ಕಿರಿಯ ಆರೋಗ್ಯ ಪರಿವೀಕ್ಷಕರು | ಘನತ್ಯಾಜ್ಯ ನಿರ್ವಹಣೆ, ಹೆಮ್ಮಿಗೆಪುರ ವಾರ್ಡ್ ನಂ.198 |

ಶ್ರೀ ದಯಾನಂದ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ಅಧಿಕಾರಿಗಳನ್ನು ಹಾಗೂ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರನ್ನೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ಹಿಂದಿನ ಸಭಾ ನಡವಳಿಯನ್ನು ಓದಿ ರೆಕಾರ್ಡ್ ಮಾಡಲಾಯಿತು ಮತ್ತು ತೆಗೆದುಕೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

❖ <u>ವಿದ್ಯುತ್ ಬೀದಿ ದೀಪಗಳ ನಿರ್ವಹಣೆ</u> :- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಕಾನ್‌ಕಾರ್ಡ್ ಬಡಾವಣೆಯಲ್ಲಿ ಹೊಸ ವಿದ್ಯುತ್ ದೀಪಗಳ ಫಿಟ್ಟಿಂಗ್‌ಗಳನ್ನು ಅಳವಡಿಸಲು ಹಾಗೂ ವಿದ್ಯುತ್ ದೀಪಗಳನ್ನು ದುರಸ್ಥಿಪಡಿಸಲು ಸಭೆಯ ಗಮನಕ್ಕೆ ತರಲಾಯಿತು. ಸಭೆಯಲ್ಲಿ ಹಾಜರಿದ್ದ ವಿದ್ಯುತ್ ವಿಭಾಗದ



Scanned by CamScanner

ಅಭಿಯಂತರರಾದ ಶ್ರೀ ಗವಿಸಿದ್ದಯ್ಯ ರವರು ಮಾತನಾಡಿ ಸಮಸ್ಯೆಯನ್ನು ಪರಿಹರಿಸಿಕೊಡಲಾಗುವುದೆಂದು ಸಭೆಗೆ ತಿಳಿಸಿದರು.

❖ **ಘನತ್ಯಾಜ್ಯ ನಿರ್ವಹಣೆ** :- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರದೇಶಗಳಿಗೆ ಪ್ರತ್ಯೇಕವಾಗಿ ಹಸಿಕಸ ಮತ್ತು ಒಣಕಸ ವಾಹನವನ್ನು ಕಳುಹಿಸಲು ಸಭೆಗೆ ಕೋರಲಾಯಿತು. ಈ ಸಂಬಂಧ ಸಭೆಯಲ್ಲಿ ಹಾಜರಿದ್ದ ಘನತ್ಯಾಜ್ಯ ವಿಭಾಗದ ಅಧಿಕಾರಿಗಳು ಮಾತನಾಡಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿದ್ದು, ಕೆಲವು ದಿನಗಳಲ್ಲಿ ಪ್ರತ್ಯೇಕ ವಾಹನಗಳಿಂದ ತ್ಯಾಜ್ಯವನ್ನು ಸಂಗ್ರಹಿಸಲಾಗುವುದೆಂದು ಸಭೆಗೆ ತಿಳಿಸಿದರು.

❖ **ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿ** :- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಕೃಷ್ಣ ಗಾರ್ಡನ್ ಡಿ-ಬ್ಲಾಕ್ ಹಾಗೂ ಬಿ.ಹೆಚ್.ಇ.ಎಲ್. ಬಡಾವಣೆಯಲ್ಲಿ ವಿದ್ಯುತ್ ವ್ಯತ್ಯಯ ಸಂಭವಿಸುತ್ತಿದ್ದು ಮತ್ತು ವಿದ್ಯುತ್ ತಂತಿಗಳ ಕೆಳಗೆ ಮರಗಳು ಬೆಳೆದು ವಿದ್ಯುತ್ ತಂತಿಗೆ ತಾಗುತ್ತಿದ್ದು, ಇದರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಸಭೆಗೆ ಕೋರಲಾಯಿತು. ಈ ಸಂಬಂಧ ಪರಿಶೀಲಿಸಲಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಅಧಿಕಾರಿಗಳು ಸಭೆಗೆ ಸತತವಾಗಿ ಗೈರು ಹಾಜರಾಗುತ್ತಿರುವುದನ್ನು ಗಮನಿಸಲಾಯಿತು. ಬಡಾವಣೆ ನಿವಾಸಿಗಳಿಗೆ ನೇರವಾಗಿ ವಿದ್ಯುತ್ ಕಛೇರಿಗೆ ಲಿಖಿತ ದೂರನ್ನು ನೀಡಲು ಸೂಚಿಸಲಾಯಿತು.

❖ **ಅರಣ್ಯ ಇಲಾಖೆ.ಬಿ.ಬಿ.ಎಂ.ಪಿ:**- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಕೃಷ್ಣ ಗಾರ್ಡನ್ ಡಿ-ಬ್ಲಾಕ್ ಹಾಗೂ ಬಿ.ಹೆಚ್.ಇ.ಎಲ್. ಬಡಾವಣೆಯಲ್ಲಿ ಮರಗಳು ತುಂಬಾ ಬೆಳೆದಿದ್ದು ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದರಿಂದ ಸದರಿ ಮರಗಳ ಕೊಂಬೆಗಳನ್ನು ಟ್ರಿಮ್ಮಿಂಗ್ ಮಾಡಲು ಸಭೆಗೆ ತಿಳಿಸಿದರು. ಈ ಸಂಬಂಧ ಪರಿಶೀಲಿಸಲಾಗಿ ಅರಣ್ಯ ಇಲಾಖೆ, ಬಿ.ಬಿ.ಎಂ.ಪಿ. ಅಧಿಕಾರಿಗಳು ಸಭೆಗೆ ಸತತವಾಗಿ ಗೈರು ಹಾಜರಾಗುತ್ತಿರುವುದನ್ನು ಗಮನಿಸಲಾಯಿತು. ಬಡಾವಣೆ ನಿವಾಸಿಗಳಿಗೆ ನೇರವಾಗಿ ಅವರ ಕಛೇರಿಗೆ ಲಿಖಿತ ದೂರನ್ನು ನೀಡಲು ಸೂಚಿಸಲಾಯಿತು.

❖ **ಬೆಂಗಳೂರು ಜಲ ಮಂಡಳಿ(110 ಹಳ್ಳಿ ಯೋಜನೆಯ ವಿಭಾಗ)** :- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಾಜರಹಳ್ಳಿ ಬಾಲಾಜಿ ಬಡಾವಣೆಯಲ್ಲಿ 11ನೇ-ಡಿ ಕ್ರಾಸ್, ಮನೆ ನಂ.529 ಸ್ಕಂದ ನಿಲಯದ ಮುಂಭಾಗ 110 ಹಳ್ಳಿ ಯೋಜನೆಯಡಿ ನಿರ್ಮಾಣ ಮಾಡಿರುವ ನೂತನ ಮ್ಯಾನ್‌ಹೋಲ್ ಮಳೆಬಂದ ಸಂಧರ್ಭದಲ್ಲಿ ಉಕ್ಕಿ ಹರಿದು ಮನೆಗಳಿಗೆ ನೀರು ನುಗ್ಗುತ್ತಿದ್ದು, ಇದನ್ನು ಪರಿಹರಿಸಬೇಕೆಂದು ಸಭೆಗೆ ಮತ್ತೊಮ್ಮೆ ಕೋರಿದರು. ಈ ಸಂಬಂಧ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಿಸಿದ ಜಲ ಮಂಡಳಿ ಅಧಿಕಾರಿಗಳು ಸಭೆಗೆ ಸತತವಾಗಿ ಗೈರುಹಾಜರಾಗುತ್ತಿರುವುದನ್ನು ಕಂಡು ಅಸಮಧಾನ ವ್ಯಕ್ತಪಡಿಸಿದರು. ಈ ಸಂಬಂಧ ಪ್ರತಿ ವಾರ್ಡ್ ಕಮಿಟಿ ಸಭೆಗೆ ಹಾಜರಾಗಲು ಸೂಚಿಸಿ ಪತ್ರ ಬರೆಯಲು



Scanned by CamScanner

ಮತ್ತು ಮೇಲ್ಕಂಡ ದೂರಿನ ಸಂಬಂಧ ಸೂಕ್ತ ಪರಿಹಾರ ಕೆಲಸ ಕೈಗೊಳ್ಳಲು ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು.

❖ **ಬೆಂಗಳೂರು ಜಲ ಮಂಡಳಿ** :- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಬಿ.ಹೆಚ್.ಇ.ಎಲ್ ಬಡಾವಣೆಯಲ್ಲಿ ಕುಡಿಯುವ ನೀರಿನ ಸಂಪರ್ಕಕ್ಕೆ ಅಳವಡಿಸಿರುವ ನೀರಿನ ಮೀಟರ್‌ಗಳು ಸರಿಯಾಗಿ ಕೆಲಸ ಮಾಡುತ್ತಿರುವುದಿಲ್ಲವೆಂದು ಮತ್ತು ಹೆಚ್ಚಿನ ನೀರಿನ ಬಿಲ್ ಬರುತ್ತಿರುವುದನ್ನು ಸಭೆಗೆ ತಿಳಿಸಿದರು. ಈ ಸಂಬಂಧ ಸಭೆಯಲ್ಲಿ ಹಾಜರಿದ್ದ ಜಲ ಪರಿವೀಕ್ಷಕರಿಗೆ ಸದರಿ ಸಮಸ್ಯೆಯನ್ನು ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳು ಕೋರಲಾಯಿತು.

❖ **ಬೃಹತ್ ನೀರುಗಾಲುವೆ ವಿಭಾಗ, ರಾರಾ ನಗರ ವಲಯ** :- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಾಜರಹಳ್ಳಿ ಬಾಲಾಜಿ ಬಡಾವಣೆಯಲ್ಲಿ ಬೃಹತ್ ಮಳೆನೀರು ಚರಂಡಿ ನಿರ್ಮಾಣ ಹಂತದಲ್ಲಿದ್ದು, ಕೆಲಸದ ಪ್ರಗತಿಯು ಕುಂಠಿತವಾಗಿದ್ದು, ಶೀಘ್ರವಾಗಿ ಕೆಲಸ ನಿರ್ವಹಿಸಿ ಪೂರ್ಣಗೊಳಿಸಲು ಸಭೆಗೆ ಕೋರಲಾಯಿತು. ಈ ಸಂಬಂಧ ನೋಡಲ್ ಅಧಿಕಾರಿಯವರು ಮಾತನಾಡಿ ಕಾಮಗಾರಿಯನ್ನು ತ್ವರಿತವಾಗಿ ನಿರ್ವಹಿಸಿ ಪೂರ್ಣಗೊಳಿಸುವಂತೆ ಸಭೆಗೆ ತಿಳಿಸಿದರು.

❖ **ವಾರ್ಡ್‌ನ ಕಾಮಗಾರಿಗಳು** :- 1) ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಿಜಯಶ್ರೀ ಬಡಾವಣೆಯಲ್ಲಿ ಭಾಗಶಃ ರಸ್ತೆ ಗುಂಡಿಗಳನ್ನು ಮುಚ್ಚಿದ್ದು, ಉಳಿಕೆ ಗುಂಡಿಗಳನ್ನು ಶೀಘ್ರವಾಗಿ ಮುಚ್ಚಲು ಸಭೆಯ ಗಮನಕ್ಕೆ ಕೋರಲಾಯಿತು. ಈ ಸಂಬಂಧ ಸಭೆಯಲ್ಲಿಲ್ಹಾಜರಿದ್ದ ವಾರ್ಡ್‌ನ ಸಹಾಯಕ ಅಭಿಯಂತರರು ಮುಂದಿನ ವಾರದಲ್ಲಿ ರಸ್ತೆಯ ಎಲ್ಲಾ ಗುಂಡಿಗಳನ್ನು ಮುಚ್ಚಿಸಲಾಗುವುದೆಂದು ಸಭೆಗೆ ತಿಳಿಸಿದರು.

2) ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಕೃಷ್ಣ ಗಾರ್ಡನ್-ಡಿ ಬ್ಲಾಕ್ ರಸ್ತೆಯಲ್ಲಿ ಗುಂಡಿಗಳು ಉಂಟಾಗಿದ್ದು, ರಸ್ತೆಯನ್ನು ದುರಸ್ಥಿಪಡಿಸಲು ಸಭೆಗೆ ಕೋರಲಾಯಿತು. ಈ ಸಂಬಂಧ ಸಭೆಯಲ್ಲಿಹಾಜರಿದ್ದ ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡಿ ಸದರಿ ರಸ್ತೆಯು ಬೃಹತ್ ನೀರುಗಾಲು ಪಕ್ಕದಲ್ಲಿ ಹಾದುಹೋಗುವ ರಸ್ತೆಯಾಗಿದ್ದು, ಬೃಹತ್ ನೀರುಗಾಲುವೆ ತಡೆಗೋಡೆ ನಿರ್ಮಾಣ ಮಾಡುವ ಸಂಧರ್ಭದಲ್ಲಿ ರಸ್ತೆಯು ಸಂಪೂರ್ಣವಾಗಿ ಹಾಳಾಗಿದ್ದು, ಈ ರಸ್ತೆಯನ್ನು ಹೊಸದಾಗಿ ನಿರ್ಮಾಣ ಮಾಡಬೇಕಾಗಿದ್ದು, ಅಮೃತ ನಗರೋತ್ಥಾನ ಅನುದಾನದಡಿ ಅಭಿವೃದ್ಧಿ ಪಡಿಸಲಾಗುವುದೆಂದು ಸಭೆಗೆ ತಿಳಿಸಿದರು.



Scanned by CamScanner

3) ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಾಜರಹಳ್ಳಿ ಬಾಲಾಜಿ ಬಡಾವಣೆಯಲ್ಲಿರುವ ಬಾಕಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಸಭೆಯ ಗಮನಕ್ಕೆ ಕೋರಲಾಯಿತು. ಈ ಸಂಬಂಧ ಸಭೆಯಲ್ಲಿಹಾಜರಿದ್ದ ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡಿ ಸದರಿ ರಸ್ತೆಯು ಸಂಪೂರ್ಣವಾಗಿ ಹಾಳಾಗಿದ್ದು, ಈ ರಸ್ತೆಯನ್ನು ಹೊಸದಾಗಿ ನಿರ್ಮಾಣ ಮಾಡಬೇಕಾಗಿದ್ದು, ಅಮೃತ ನಗಗೋತ್ಥಾನ ಅನುದಾನದಡಿ ಅಭಿವೃದ್ಧಿ ಪಡಿಸಲಾಗುವುದೆಂದು ಸಭೆಗೆ ತಿಳಿಸಿದರು.

18/06/22

(ದಯಾನಂದ.ಎನ್)
ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್-198, ಹೆಮ್ಮಿಗೆಪುರ

(ಶಿವಕುಮಾರ್)
ನೋಡಲ್ ಅಧಿಕಾರಿ
ವಾರ್ಡ್ ಸಮಿತಿ
ವಾರ್ಡ್-198, ಹೆಮ್ಮಿಗೆಪುರ

**ಪ್ರತಿಯನ್ನು:-**

1) ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ರವರ ಕಛೇರಿಗೆ ಸಲ್ಲಿಸಿದೆ.
2) ಕೌನ್ಸಿಲ್ ಕಾರ್ಯದರ್ಶಿ, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
4) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
5) ಅಧೀಕ್ಷಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
6) ಕಾರ್ಯಪಾಲಕ ಅಭಿಯಂತರರು (ಕೆಂಗೇರಿ ವಿಭಾಗ) ರವರ ಅವಗಾಹನೆಗೆ ಸಲ್ಲಿಸಿದೆ.
7) ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) ರಾರಾನಗರ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8) ಕಾರ್ಯಪಾಲಕ ಅಭಿಯಂತರರು (ಯೋಜನಾ ವಿಭಾಗ), ರಾರಾನಗರ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
9) ಕಂದಾಯ ಅಧಿಕಾರಿಗಳು (ಕೆಂಗೇರಿ ವಲಯ) ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10) ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ, ರಾಜರಾಜೇಶ್ವರಿನಗರ ವಿಭಾಗ) ರವರ ಅವಗಾಹನೆಗೆ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.



Scanned by CamScanner

12) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ (110 ಹಳ್ಳಿ ಯೋಜನಾ ಉಪವಿಭಾಗ) ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

13) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

14) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ-ಕೆಂಗೇರಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

15) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ-ತಲಘಟ್ಟಪುರ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

16) ತೋಟಗಾರಿಕಾ ಅಧೀಕ್ಷಕರು, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

17) ಪಶು ಸಂಗೋಪನ ಅಧಿಕಾರಿಗಳು, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

18) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾರಾನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

19) ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಕೆಂಗೇರಿ ಸಂಚಾರಿ ಪೊಲೀಸ್‌ಠಾಣೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

20) ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ತಲಘಟ್ಟಪುರ ಪೊಲೀಸ್‌ಠಾಣೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

21) ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ರಾಜರಾಜೇಶ್ವರಿನಗರ ಪೊಲೀಸ್‌ಠಾಣೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

22) ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್‌ಠಾಣೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.



Scanned by CamScanner